ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ಪರಿಶೀಲಿಸುತ್ತೇವೆ.

Mr. Speaker : This is a good suggestion.

ಶ್ರೀ ಜಯಪ್ರಕಾಶ್ ಹೆಗ್ಡೆ : ಗ್ರಾಮಪಂಚಾಯ್ತಿ ಮೊಸಲಾತಿ ಬಗ್ಗೆ ಹೇಳಲಿಲ್ಲ. ಈಗ ಎರಡೂವರೆ ವರ್ಷವಾಯಿತು. ಮುಂದೆ ಯಾವರೀತಿ?

ಅಧ್ಯಕ್ಷರು : ಕಾನೂನು ಪ್ರಕಾರ ಮಾಡುತ್ತಾ ಹೋಗುತ್ತಾರೆ ಬಿಡಿ.

ಶ್ರೀ ಕರಿಯಣ್ಣ : ಆಕ್ಟ್‌ನಲ್ಲೇ ಅದಕ್ಕೆ ಪ್ರಾವಿಜನ್ ಇದೆ ಯಾವಾಗ ಮಾಡಬೇಕೆಂದು. ಅದನ್ನು ಓದದೆ ಯಾವಾಗ ಮಾಡುತ್ತೀರ ಅಂತ ಕೇಳಿದರೆ ಹೇಗೆ ಸ್ವಾಮಿ? ನೀವೂ ಮಂತ್ರಿಗಳಾಗಿದ್ದವರು, ಕಾನೂನು ಪ್ರಕಾರ ಹೋಗುವವರು. ಅವರನ್ನು ಯಾವ ತರಹ ಮಾಡುತ್ತೀರಾ ಎಂದು ಕೇಳಿದರೆ ಹೇಗೆ? ಇವೆಲ್ಲಾ ಕೇಳುವ ಪ್ರಶ್ನೆಗಳಲ್ಲ.

ಅಧ್ಯಕ್ಷರು : ನಾನು ಈ 2002-03ನೇ ಸಾಲಿನ ಅನುದಾನ ಬೇಡಿಕೆಗೆ ಸಂಬಂಧಪಟ್ಟ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

ದಿನಾಂಕ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ 46, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿರಾಜ್ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,04,108,20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,262.00 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

ಅಭಿಯಾಚನೆ ಕ್ರಮಾಂಕ 46 - ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತಿ ರಾಜ್

ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ಯ ಇಲಾಖೆಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,04,108,20 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,262.00 ಲಕ್ಷ ರೂಗಳಿಗಿಂತ ಮೀರದ ಮೊತ್ತನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ಸೂಪರ ಲೋಟೋ ಲಾಟರಿಯಿಂದ ಆಗುತ್ತಿರುವ ಅನಾಹುತದ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಲ್ಲಿಕಾರ್ಜುನ್(ರವರು ಸೂಪರ್‌ಲೋಟೋ ಬಗ್ಗೆ ಎತ್ತಿದ್ದಾರೆ. ಇದು ಇಂಪಾರ್ಟೆಂಟ್.

ಸಭಾಧ್ಯಕ್ಷರು : ಎಲ್ಲಾ ಇಂಪಾರ್ಟೆಂಟೆ. ಯಾವುದೂ ಅನ್‌ಇಪಾರ್ಟೆಂಟ್ ಅಂತ ನಾನು ಹೇಳುವುದಿಲ್ಲ.

ಪಿ.ಜಿ.ಆರ್. ಸಿಂಧ್ಯ : ಇವತ್ತು ಎಲೆಕ್ಟ್ರಾನಿಕ್ ಅಥವಾ ಕಂಪ್ಯೂಟರ್ ಲಾಟರಿ ಅಂತ ಏನು ಕರೆಯುತ್ತೇವೆ ಅದು ಇವತ್ತಿನ ಅಜೆಂಡಾದಲ್ಲಿದೆ. ಅರ್ಧ ಗಂಟೆಯಲ್ಲಿ ಮುಗಿಸಿಬಿಡುತ್ತಾರೆ.

ಸಭಾಧ್ಯಕ್ಷರು : ನಾಳೆ ನಾಡಿದ್ದು ತಗೊಳ್ಳೋಣ.

6. (2). 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಮುಂದುವರೆದುದು

ಅಧ್ಯಕ್ಷರು : ಇನ್ನು ಮುಂದೆ ಇಲಾಖೆಗಳ ಬೇಡಿಕೆ ಮೇಲೆ ಚರ್ಚೆ ಮುಂದುವರೆಯುವುದು.

(ಮಾನ್ಯ ಉಪಾಧ್ಯಕ್ಷರಾದ ಶ್ರೀ ಮನೋಹರ ಹೆಚ್ ತಹಸೀಲ್ದಾರ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

(ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಸಕ್ಕರೆ, ಮೀನುಗಾರಿಕೆ, ಬಂದರು, ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಶ್ರೀ ಉಮೇಶ ಎ ಕತ್ತಿ (ಹುಕ್ಕೇರಿ) : ಮಾನ್ಯ ಉಪಾಧ್ಯಕ್ಷರೇ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಅನುವು ಮಾಡಿಕೊಟ್ಟ ತಮಗೆ ಮೊದಲಿಗೆ ಧನ್ಯವಾದಗಳನ್ನರ್ಪಿಸುತ್ತಾ ಈ ರಾಜ್ಯದಲ್ಲಿ ರೇಷ್ಮೆ ಮತ್ತು ತೆಂಗಿನ ನುಸಿರೋಗದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕಳೆದ 15 ದಿನದಿಂದ ವಾಣಿಜ್ಯ ಬೆಳೆಯಾದ ಕಬ್ಬಿನ ಬಗ್ಗೆ ಚರ್ಚೆ ಮಾಡಲು ರೂಲ್ 69ರ ಕೆಳಗೆ ನಾನು ನೋಟಿಸ್ ಕೊಟ್ಟರೂ ಸಹ ಅದು ಚರ್ಚೆಗೆ ಬರಲಿಲ್ಲ. ಬೇಡಿಕೆಗಳ ಬಗ್ಗೆ ಮಾತನಾಡಲು ಅನುವು ಮಾಡಿಕೊಟ್ಟಿದ್ದೀರಿ ಈ ರಾಜ್ಯದಲ್ಲಿ 180 ರಿಂದ 200 ಲಕ್ಷ ಟನ್‌ನಷ್ಟು ಕಬ್ಬು ಉತ್ಪಾದನೆಯಾಗುತ್ತಿದ್ದು 1995ಕ್ಕಿಂತ ಮೊದಲು 120 ರಿಂದ 140 ಲಕ್ಷ ಟನ್ ಉತ್ಪಾದನೆಯಾಗುತ್ತಿತ್ತು. 95-96, 96-97ರಲ್ಲಿ ಕಬ್ಬಿನ ಉತ್ಪಾದನೆ ಹೆಚ್ಚಾಗಿ ಸಾಕಷ್ಟು ತೊಂದರೆ ಅನುಭವಿಸಿದ ಅನುಭವ ಆಗಿನ ಸರ್ಕಾರ ನಮ್ಮದಾಗಿತ್ತು. ಆಗ ರೈತರಿಗೆ ಸಾಲ ಕೊಡುವ ದಿಸೆಯಲ್ಲಿ ಸಾಕಷ್ಟು ಸಹಾಯವನ್ನು ಮಾಡಿ ತೊಂದರೆಯನ್ನು ನಿವಾರಿಸುವ ಕಾರ್ಯಕ್ರಮವನ್ನು ಹಾಕಿದೆವು. ಆದರೆ ಇವತ್ತು ಕೇಂದ್ರ ಸರ್ಕಾರದ ಗ್ಯಾಟ್ ಒಪ್ಪಂದ ಮತ್ತು ಲೆಬರ್‌ಲೈಜೇಷನ್ ಎಫ್‌ಕ್ಟ್‌ನಿಂದ ರಾಜ್ಯದಲ್ಲಿ ಸುಮಾರು ಇವತ್ತಿಗೆ ಒಂದು ಸಾವಿರ ಕೋಟಿ ರೂ.ಗಳಷ್ಟು ಸಕ್ಕರೆ ದಾಸ್ತಾನು ಗೋಡೌನ್‌ಗಳಲ್ಲಿದೆ. ಹಳೆಯ ಮೈಸೂರಿನಲ್ಲಿ ಈಗಾಗಲೇ ಸಕ್ಕರೆ ಕಾರ್ಖಾನೆಗಳು ತಮ್ಮ ಹಂಗಾಮವನ್ನು ಪ್ರಾರಂಭಮಾಡಿ ರೈತರ ಕಬ್ಬನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಪ್ರಾರಂಭ ಮಾಡಿವೆ. ಉತ್ತರ ಕರ್ನಾಟಕದಲ್ಲಿ ಬರುವ ಅಕ್ಟೋಬರ್‌ನಿಂದ ಹಂಗಾಮ ಪ್ರಾರಂಭವಾಗುವಂಥದ್ದು ಆಗುತ್ತದೆ. ಆಗ ಇನ್ನೂ ಈ ದಾಸ್ತಾನನ್ನು ಇಟ್ಟುಕೊಂಡು ನಾವು ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದೇ ಆದರೆ, ರೈತರಿಗೆ ಹಣ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಇರುವ ಆತಂಕವನ್ನು ತಮ್ಮ ಮುಂದೆ ವ್ಯಕ್ತಪಡಿಸಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರ ಬಹಳ ಚಿಂತನೆಯನ್ನು ಮಾಡಬೇಕಾಗುತ್ತದೆಂದು ಹೇಳುತ್ತೇನೆ. ಏಕೆಂದರೆ ಕಳೆದ ವರ್ಷ ಅದರ ಹಿಂದಿನ ವರ್ಷ ಹಂಗಾಮಿನ ಕ್ರಷ್ ಮಾಡಿದ ಕಬ್ಬಿನ ಸಕ್ಕರೆ ಸುಮಾರು 12 ಲಕ್ಷ ಟನ್‌ನಷ್ಟು ರಾಜ್ಯದಲ್ಲಿ ದಾಸ್ತಾನು ಇದೆ. ಸುಮಾರು ಅದರ ಅಂದಾಜು ಕಿಮ್ಮತ್ತು ಮಾಡಿದ್ದಾದರೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಸಕ್ಕರೆ ಇವತ್ತೂ ಇರುವುದರಿಂದ ಮುಂದೆ ಹಂಗಾಮವನ್ನು ಪ್ರಾರಂಭ ಮಾಡಿ ಕಬ್ಬಿನ ಮೇಲೆ ಸಕ್ಕರೆ ಅಡವು ಇಟ್ಟು ಸಾಲ ತೆಗೆದು ರೈತರಿಗೆ ರೊಕ್ಕ ಕೊಡುವುದು ಮೊದಲಿನಿಂದಲೂ ನಡೆದು ಬಂದ ಪದ್ಧತಿ. ಆದರೆ ಸಕ್ಕರೆ ದಾಸ್ತಾನು ಇರುವುದರಿಂದ ಯಾವುದೇ ಬ್ಯಾಂಕುಗಳು ಮುಂದೆ ಉತ್ಪಾದನೆಯಾಗುವ ಸಕ್ಕರೆ ಮೇಲೆ ಸಾಲವನ್ನು ಕೊಡಲಿಕ್ಕೆ ಮುಂದೆ ಬರುವುದಿಲ್ಲ ಎಂದು ಹೇಳಿ ನಮ್ಮ ಅನಿಸಿಕೆ. ಏಕೆಂದರೆ ಈಗಾಗಲೇ ನಬಾರ್ಡ್‌ನವರು ಸಾಕಷ್ಟು ನಮ್ಮ ವರ್ಕಿಂಗ್ ಕ್ಯಾಪಿಟಲ್‌ನ್ನು